ನೆನಪಿರುವುದು ನನ್ನ ತರಗತಿಯಲ್ಲೇ ಓದುತ್ತಿದ್ದ ಜಯರಾಮ ಎಂಬ ಹುಡುಗನ ಬಗ್ಗೆ. ದಿನವೂ ಶಾಲೆಗೆ ನಮ್ಮ ಮನೆಯ ಮುಂದೆಯೇ ಹೋಗುತ್ತಿದ್ದ ಜಯರಾಮ ದೊಡ್ಡಹನುಮನ ಮಗ ಎಂದು ಕೆಲವು ದಿನಗಳ ನಂತರ ಗೊತ್ತಾಯಿತು. ಜಯರಾಮ ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಕೆಲವು ಕಡೆ ಹರಿದು ಕೊಳೆಯಾಗಿದ್ದ ಬಟ್ಟೆ ತೊಡುತ್ತಿದ್ದ. ಅನೇಕ ಸಲ ತನ್ನ ಅಳತೆಗೆ ಮೀರಿದ ಶರಟನ್ನೂ ತೊಟ್ಟು ಸ್ಕೂಲಿಗೆ ಬರುತ್ತಿದ್ದ. ನಾನು ಸೂಕ್ಷ್ಮವಾಗಿ ಗಮನಿಸಿದಂತೆ ಸ್ವಲ್ಪ ಉಳ್ಳವರು ಮತ್ತು ಒಳ್ಳೆಯ ಬಟ್ಟೆ ತೊಡುವವರ ಬಳಿಗಂತೂ ಆತ ಹೋಗುತ್ತಿರಲಿಲ್ಲ. ಅವರನ್ನು ಮಾತೂ ಆಡಿಸುತ್ತಿರಲಿಲ್ಲ! ತರಗತಿಯ ಒಂದು ಮೂಲೆಯಲ್ಲಿ ಕಂಡೂ ಕಾಣದಂತೆ ಕುಳಿತುಕೊಳ್ಳುತ್ತಿದ್ದ. ನಾನು ಕಂಡಂತೆ ಶಿಕ್ಷಕರಂತೂ ಅವನನ್ನು ಮಾತನಾಡಿಸುತ್ತಲೇ ಇರಲಿಲ್ಲ! ಅವನ ಸಹಪಾಠಿಗಳೂ ಅವನೊಡನೆ ಮಾತನಾಡುತ್ತಿದ್ದುದು ಬಹು ಕಡಿಮೆ. ಆದರೆ, ಓದಿನಲ್ಲಂತೂ ಎಲ್ಲರಿಗಿಂತ ಮುಂದಿದ್ದ. ತರಗತಿಯಲ್ಲಿ ಶಿಕ್ಷಕರು ತಾವು ಕೇಳಿದ ಪ್ರಶ್ನೆಗೆ ಯಾರೂ ಉತ್ತರ ಹೇಳದಿದ್ದಾಗ, ಕೊನೆಗೆ ಜಯರಾಮನನ್ನು ಕೇಳುತ್ತಿದ್ದರು. ಅವನು ಎದ್ದುನಿಂತು ಸರಿಯಾದ ಉತ್ತರ ಹೇಳುತ್ತಿದ್ದ. ಆದರೂ ಶಿಕ್ಷಕರು ಅವನಿಗೆ ಶಭಾಸ್‌ಗಿರಿಯನ್ನೂ ಹೇಳುತ್ತಿರಲಿಲ್ಲ! ನನ್ನ ಆಗಿನ ತಿಳಿವಳಿಕೆಗೆ ಇದೆಲ್ಲಾ 'ಹೀಗೇಕೆ?' ಎಂದು ಕೇಳುವಂತಿರಲಿಲ್ಲ. ಹಣಕಾಸು ಇಲ್ಲದ ದೊಡ್ಡಹನುಮ ಕಳೆದ ವರ್ಷ ಓದಿ ಪಾಸಾಗಿದ್ದ ಹಳೆಯ ವಿದ್ಯಾರ್ಥಿಗಳಿಂದ ಕಾಡಿ ಬೇಡಿ ಹಳೆಯ ಪುಸ್ತಕಗಳನ್ನು ಪಡೆದು, ಅದನ್ನೇ ತನ್ನ ಮಗನಿಗೆ ಕೊಡುತ್ತಿದ್ದ. ಮರಾಳೆ ಇಲ್ಲದ, ಅಲ್ಲಲ್ಲಿ ಹರಿದ ಕೆಲವು ಪುಸ್ತಕಗಳನ್ನು ಜಯರಾಮ ತರುತ್ತಿದ್ದ. ಹರಿದ ಜೋಬಿನಲ್ಲಿ ಒಂದು ಕ್ಯಾಪ್ ಇಲ್ಲದ ಪೆನ್ನು ಅಥವಾ ಮೋಟು ಪೆನ್ಸಿಲ್ ಇರುತ್ತಿತ್ತು. ಆದರೆ, ಆಟದಲ್ಲಂತೂ ಅವನು ಎಲ್ಲರನ್ನೂ ಸೋಲಿಸುತ್ತಿದ್ದ. ಹೋಬಳಿ ಮತ್ತು ತಾಲೂಕು ಮಟ್ಟದ ಶಾಲಾ ಕ್ರೀಡಾಕೂಟದಲ್ಲಿ ನಮ್ಮ ಶಾಲೆಗೆ ಅವನೇ ಹೆಚ್ಚಿನ ಬಹುಮಾನ ತರುತ್ತಿದ್ದುದು. ನಾನು ಯಾವಾಗ ನೋಡಿದರೂ ಅವನ ಕೈ ಕಾಲುಗಳಲ್ಲಿ ಒಂದೆರಡು ಹೊಸ ಗಾಯಗಳು ಇದ್ದೇ ಇರುತ್ತಿದ್ದವು. ಅವನಲ್ಲಿದ್ದ ಒಂದು ದೊಡ್ಡ ದೋಷವೆಂದರೆ, ಆ ಊರಿನಲ್ಲಿ ನಡೆಯುತ್ತಿದ್ದ ಸಂತೆಯ ದಿನ ಶಾಲೆಗೆ ಬರುತ್ತಿರಲಿಲ್ಲ. ಅಂದು ತಂದೆ ಹೊಸೆದ ಹಗ್ಗ ಮತ್ತು ಸಿಂಬೆಯನ್ನು ಮಾರಲು ಸಂತೆಗೆ ಹೋಗುತ್ತಿದ್ದ. ಅವರ ಗಳಿಕೆಯ ಮೂಲವೂ ಇದೇ ಆದ್ದರಿಂದ ಅವನು ಸಂತೆಗೆ ಹೋಗುವುದು ಅನಿವಾರ್ಯವಾಗಿತ್ತು. ಇದರ ಜೊತೆಗೆ ಇನ್ನಾವುದಾದರೂ ದಿನ ಯಾವುದಾದರೂ ಸಬೂಬು ನೀಡಿ ಗೈರುಹಾಜರಾಗುತ್ತಿದ್ದ. ಹೀಗೆ ವಾರದಲ್ಲಿ ಕನಿಷ್ಠ ಎರಡು ದಿನ ಸ್ಕೂಲಿಗೆ ತಪ್ಪಿಸಿಕೊಳ್ಳುವುದನ್ನು ಅವನು ಮರೆಯುತ್ತಿರಲಿಲ್ಲ. ಇದರ ಬಗ್ಗೆ ಶಿಕ್ಷಕರು ಎಷ್ಟೇ ಹೊಡೆದರೂ, ಬಡಿದರೂ ಅವನು ಯಾವುದಕ್ಕೂ ಕೇರ್ ಮಾಡುತ್ತಿರಲಿಲ್ಲ.

ಆಗ ಶಾಲೆಯ ಫೀಸು ಮೂರು ಅಥವಾ ನಾಲ್ಕು ರೂಪಾಯಿ ಇತ್ತು ಎಂಬುದು ನನಗೆ ನೆನಪಿದೆ. ನಮ್ಮ ತರಗತಿಯ ಎಲ್ಲ ಹುಡುಗರೂ ಕಾಲ ಕಾಲಕ್ಕೆ ಫೀಸನ್ನು ಕಟ್ಟುತ್ತಿದ್ದರು. ಆದರೆ, ಜಯರಾಮ ಮಾತ್ರ ಶಿಕ್ಷಕರಿಂದ ಹತ್ತಾರು ಬಾರಿ ಹೇಳಿಸಿಕೊಳ್ಳುತ್ತಿದ್ದ. ಕೊನೆಗೆ ಶಿಕ್ಷಕರು ಅವನನ್ನು ಫೀಸು ತರುವತನಕ ಶಾಲೆಗೆ ಬರಬೇಡ ಎಂದು ನಿರ್ದಯವಾಗಿ ಹೊರಗೆ ಕಳುಹಿಸುತ್ತಿದ್ದರು. ಹೀಗಾದ ಒಂದೆರಡು ದಿನಕ್ಕೆ ಅವನ ತಂದೆ ದೊಡ್ಡಹನುಮ ಜೋಬಿನಲ್ಲಿ ಚಿಲ್ಲರೆ ಕಾಸನ್ನು ತಂದು, ಅದನ್ನು ಶಿಕ್ಷಕರ ಮುಂದೆ ನಡುಬಾಗಿ ನಿಂತು ಎಣಿಸಿಕೊಡುತ್ತಿದ್ದ. ದೊಡ್ಡಹನುಮನ ಹಿಂದೆ ಜಯರಾಮ ತಲೆತಗ್ಗಿಸಿ ನಿಂತಿರುತ್ತಿದ್ದ. 'ನಮ್ಮ ಹುಡುಗ ಸಂದಾಗಿ ಓದುವಂತೆ ನೋಡಿಕೊಳ್ಳಿ ಸಾ, ತಾಯಿಲ್ಲದ ತಬ್ಬಲಿ ಮಗ ಇದು' ಎಂದು ಎಷ್ಟು ವಿನಯವೋ ಅಷ್ಟು ವಿನಯದಿಂದ ಹೇಳಿ ಬಂದದಾಗೆಯೇ ಹೋಗುತ್ತಿದ್ದರು. ಜಯರಾಮನ ಕಣ್ಣುಗಳು ಅವನ ತಂದೆ ಹೋದ ದಿಕ್ಕನ್ನೇ ಹಿಂಬಾಲಿಸುತ್ತಿದ್ದವು. ಏನು ಕಾರಣವೋ, ನನಗೆ ಇದನ್ನೆಲ್ಲಾ ನೋಡಿದಾಗ ಮನಸ್ಸು ಮುದುಡಿಹೋಗುತ್ತಿತ್ತು. ಜಯರಾಮ ಮತ್ತು ಅವನ ತಂದೆಯ ಬಾಡಿದ ಮುಖ ಇಡೀ ರಾತ್ರಿ ನನ್ನನ್ನು ಕಾಡುತ್ತಿತ್ತು!

ನಾನು ಮತ್ತು ನೆರೆಹೊರೆಯಲ್ಲಿರುವ ನನ್ನ ವಯೋಮಾನದ ಹುಡುಗ, ಹುಡುಗಿಯರು ದಿನವೂ ಶಾಲೆ ಮುಗಿದ ನಂತರ ಮನೆಯ ಪಕ್ಕದಲ್ಲಿದ್ದ ಮೈದಾನದಲ್ಲಿ ಆಟವಾಡುವುದು ವಾಡಿಕೆಯಾಗಿತ್ತು. ಹೀಗೆ ನಾವು ಆಡುತ್ತಿರುವಾಗ ಜಯರಾಮ ದೂರದಲ್ಲಿ ಈಚಲು ಮರದ ಮರೆಯಲ್ಲಿ ನಿಂತು ನಮ್ಮ ಆಟ